

# ಲೊಂಗ್‌ಮನ್ ಗುಹೆಗಳೂ ನದಿ ಪರ್ವತಗಳೂ

ಯಾವುದೇ ಐತಿಹಾಸಿಕ ಅಥವಾ ಪ್ರವಾಸಿ ತಾಣಗಳು ನದಿ ಸಮುದ್ರ ಅಥವಾ ಪರ್ವತಗಳ ಸಮೀಪವಿದ್ದರೆ ಸಹಜವಾದ ರಮಣೀಯತೆ ಮತ್ತು ಭವ್ಯತೆಯಿಂದ ಕಂಗೊಳಿಸುತ್ತವೆ. ನಾನು ಇಲ್ಲಿ ಪ್ರಸ್ತಾಪಿಸುತ್ತಿರುವ ಲ್ಯೋಯೊಂಗ್ ಲೊಂಗ್‌ಮನ್ ಗುಹೆಗಳು ನದಿ ಮತ್ತು ಪರ್ವತ ಎರಡನ್ನೂ ಒಳಗೊಂಡಿವೆ.

ಕಳೆದ ಕೆಲವು ವರ್ಷಗಳಿಂದ ಉತ್ತರ ಚೀನಾದ ಬೀಜಿಂಗ್ ಸಮೀಪ ನಮ್ಮ ಕುಟುಂಬದ ವಾಸ್ತವ್ಯ. ವರ್ಷದ ಕೊನೆಯ ತಿಂಗಳ ರಜೆಯಲ್ಲಿ ಯಾವುದಾದರೂ ಐತಿಹಾಸಿಕ ಸ್ಥಳದ ವೀಕ್ಷಣೆಗೆ ಹೋಗಬೇಕು ಎಂದು ನಿಶ್ಚಯಿಸಿದ್ದೆವು.

ಆಧುನಿಕ ಬುಲೆಟ್ ಟ್ರೈನ್ ನಮ್ಮನ್ನು ಮೂರು ಗಂಟೆಗಳಲ್ಲಿ ಸುಮಾರು 700 ಕಿ.ಮೀ ದೂರದಲ್ಲಿರುವ ಪ್ರಾಚೀನ ಚೀನಾದ ರಾಜಧಾನಿಗಳಲ್ಲಿ ಒಂದಾಗಿದ್ದ ಲ್ಯೋಯೊಂಗ್ ಪಟ್ಟಣವನ್ನು ತಲುಪಿಸಿತ್ತು. ಹೊರಗಿನ ತಾಪಮಾನ 15 ಡಿಗ್ರಿ. ಟ್ರೈನ್ ಇಳಿಯುತ್ತಿದ್ದಂತೆ ಟ್ಯಾಕ್ಸಿ ಡ್ರೈವರ್ 'ಹಲೋ' ಎಂದ. 'ನಾನು ಇಂಗ್ಲಿಷಿನಲ್ಲಿ ಇಷ್ಟು ಮಾತ್ರ ಮಾತನಾಡಬಲ್ಲೆ' ಎಂದ. ಅಷ್ಟರಲ್ಲಿ ನನ್ನ ಮಗ, ತಾನು ಕಲಿಯುತ್ತಿರುವ ಮ್ಯಾಂಡರಿನ್ ಭಾಷೆಯಲ್ಲಿ ಮಾತನಾಡಿದಾಗ ಸಂತೋಷದಿಂದ 'ಕಳೆದ ಒಂದು ಗಂಟೆಯಿಂದ ಕಾಯುತ್ತಿದ್ದೇನೆ. ಈಗ ಚಳಿಗಾಲವಾದ್ದರಿಂದ ಪ್ರವಾಸಿಗರು ಕಡಿಮೆ, ನೀವು ಮೀಟರ್ ಎಷ್ಟು ತೋರಿಸುತ್ತದೋ ಅದಕ್ಕಿಂತ ಸ್ವಲ್ಪ ಜಾಸ್ತಿ ಕೊಡಿ' ಎಂದ! ಹೊಟೇಲಿನಲ್ಲಿ ನಮ್ಮ ಲಗೇಜನ್ನು ಇರಿಸಿ, ಮಧ್ಯಾಹ್ನದ ಊಟ ಮುಗಿಸಿ, ಸ್ವಲ್ಪ ಬಿಸಿಲು ಇರುವಾಗಲೇ ಲೊಂಗ್‌ಮನ್ ಗುಹೆಗಳನ್ನು ನೋಡಲು ಹೊರಟೆವು.

ನಾವು ಇಲ್ಲಿಯವರೆಗೆ ನೋಡಿರುವ ಚೀನಾದ ಬಹುತೇಕ ಎಲ್ಲಾ ಪ್ರೇಕ್ಷಣೀಯ ಸ್ಥಳಗಳು ಬೃಹತ್ ಆಕಾರದವೇ. ಅವುಗಳ ಮುಖ್ಯದ್ವಾರದಿಂದ ನೋಡಬೇಕಾದ ಜಾಗ ತಲುಪಲು ಏನಿಲ್ಲವೆಂದರೂ ಎರಡು ಕಿ.ಮೀ. ನಡೆಯಬೇಕು. ಕೆಲವೊಂದು ಸ್ಥಳಗಳಲ್ಲಿ ಜನರನ್ನು ನಿಯಂತ್ರಿಸುವ ಸಲುವಾಗಿ ಪಾರ್ಕಿಂಗ್ ವ್ಯವಸ್ಥೆಯನ್ನು ಬಹುದೂರ ಮಾಡಿ, ಅಲ್ಲಿಂದ ಷಟಲ್ ಬಸ್‌ಗಳ ವ್ಯವಸ್ಥೆ ಮಾಡಿರುತ್ತಾರೆ.

## ಲೊಂಗ್‌ಮನ್ ಗುಹೆಗಳು

ಲೊಂಗ್‌ಮನ್ ಗುಹೆಗಳ ಮುಖ್ಯದ್ವಾರ ಪ್ರವೇಶಿಸಿ ಟಿಕೆಟ್ ಖರೀದಿಸುತ್ತಿದ್ದಂತೆ 'ಈ ಜಾಗದಲ್ಲಿ 79,000ಕ್ಕಿಂತ ಅಧಿಕ ಜನರನ್ನು ಬಿಡಲಾಗುವುದಿಲ್ಲ. ಈ ದಿನ 9,796 ಪ್ರವಾಸಿಗರು ಒಳಗಿದ್ದಾರೆ' ಎಂದು ಅಲ್ಲಿನ ಡಿಜಿಟಲ್ ಪರದೆ ತೋರಿಸುತ್ತಿತ್ತು. ಚಳಿಗಾಲವಾದ್ದರಿಂದ ಜನಜಂಗುಳಿ ಬಹಳ ಕಡಿಮೆ ಇತ್ತು.

ಏಪ್ರಿಲ್–ಮೇ ತಿಂಗಳಿನಲ್ಲಿ ಇಲ್ಲಿ ಪಿಯೋನಿ ಹೂವಿನ ಫೆಸ್ಟಿವಲ್ ನಡೆಯುತ್ತದೆ. ಆ